ಆ) ಕಾರ್ಯ ನಿರ್ವಹಿಸದೇ ಇರುವ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸಲು ಕೈಕೊಂಡ ಕ್ರಮಗಳೇನು?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) 635

595

ಆ) ಸುಸ್ಥಿತಿಯಲ್ಲಿರದ ಕೊಳವೆ ಬಾವಿಗಳನ್ನು ಕಾಲ ಕಾಲಕ್ಕೆ ತುರ್ತಾಗಿ ದುರಸ್ತಿ ಮಾಡಿಸಲಾಗುತ್ತಿದೆ. ಇವುಗಳ ಜೊತೆಗೆ ಆ ಬೋರ್‌ವೆಲ್‌ಗಳನ್ನು ವಿವಿಧ ಭಾಗಗಳಲ್ಲಿ ತೆಗೆಸಲಾಗಿದೆ. ಅವುಗಳ ಪೈಕಿ ಹೆಚ್ಚು ನೀರು ಬರುವ ಬಾವಿಗಳಿಗೆ ಸಬ್‌ಮರ್ಸಿಬಲ್ ಪಂಪ್‌ಗಳನ್ನು ಅಳವಡಿಸಲಾಗಿದೆ.

ವಿದ್ಯಾರ್ಥಿ ವಸತಿಗೃಹಗಳಲ್ಲಿ ಸಿಬ್ಬಂದಿ ಕೊರತೆ.

817(1263) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿದ್ಯಾರ್ಥಿಗಳ ವಸತಿ ಗೃಹಗಳಲ್ಲಿ ಸಿಬ್ಬಂದಿಗಳ ಕೊರತೆಯಿರುವುದು ನಿಜವೇ?

ಆ) ಹಾಗಿದ್ದಲ್ಲಿ ಜಿಲ್ಲಾವಾರು ಕೊರತೆಯಿರುವ ಹುದ್ದೆಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಇ) ಈ ಹುದ್ದೆಗಳು ಎಷ್ಟು ಅವಧಿಯಿಂದ ಖಾಲಿ ಇವೆ?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಹೌದು

ಆ) ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿಗಳ ವಸತಿ ಗೃಹಗಳಲ್ಲಿ 396 ಮೇಲ್ವಿಚಾರಕರ ಹುದ್ದೆಗಳು ಹಾಗೂ ವಿದ್ಯಾರ್ಥಿನಿ ವಸತಿಗೃಹಗಳಲ್ಲಿ 80 ಮೇಲ್ವಿಚಾರಕರ ಹುದ್ದೆಗಳು ಒಟ್ಟು 476 ಮೇಲ್ವಿಚಾರಕರ ಹುದ್ದೆಗಳು ಮತ್ತು 954 'ಡಿ' ದರ್ಜೆ ನೌಕರರ ಹುದ್ದೆಗಳು ಖಾಲಿ ಇವೆ. ಜಿಲ್ಲಾವಾರು ವಿವರಗಳನ್ನು ಅನುಬಂಧ - 1 ರಲ್ಲಿ ನೀಡಲಾಗಿದೆ.

ಇ) ವಸತಿ ಗೃಹಗಳಲ್ಲಿ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರುಗಳ ಹಾಗೂ ಗ್ರೂಪ್ 'ಡಿ' ಖಾಲಿ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ.

	ವರ್ಷ	ವಿ.ನಿ. ಮೇಲ್ವಿಚಾರಕರು	ಅಡಿಗೆಯವರು	ಅಡಿಗೆ ಸಹಾಯಕರು
1)	1987-88	141	-	-
2)	1994-95	209	91	-
3)	1995-96	-	159	146
4)	1996-97	-	98	49
5)	1997-98	126	110	85
6)	1998-99	-	143	73
	ಒಟ್ಟು	476	601	353

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 1263ಕ್ಕೆ

ಅನುಬಂಧ-1

ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ಇರುವ ಖಾಲಿ ಹುದ್ದೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ವಿದ್ಯಾರ್ಥಿನಿಲಯ ಮೇಲ್ವಿಚಾರಕರು	ಅಡಿಗೆಯವರು	ಅಡಿಗೆ ಸಹಾಯಕರು
		ಖಾಲಿ ಹುದ್ದೆ	ಖಾಲಿ ಹುದ್ದೆ	ಖಾಲಿ ಹುದ್ದೆ
1)	ಬೆಂಗಳೂರು (ನಗರ)	22	10	5
2)	ಬೆಂಗಳೂರು (ಗ್ರಾಮಾಂತರ)	17	44	30
3)	ಚಿತ್ರದುರ್ಗ	23	13	4
4)	ಕೋಲಾರ	43	123	86
5)	ತುಮಕೂರು	45	32	27
6)	ಶಿವಮೊಗ್ಗ	11	27	18
7)	ಮೈಸೂರು	21	34	27
8)	ಮಂಡ್ಯ	9	27	11
9)	ಹಾಸನ	34	14	10
10)	ಚಿಕ್ಕಮಗಳೂರು	14	43	22
11)	ಕೊಡಗು	14	20	9
12)	ದಕ್ಷಿಣ ಕನ್ನಡ	35	2	-

13) ಬೆಳಗಾಂ	33	13	6
14) ಬಿಜಾಪುರ	47	62	11
15) ಧಾರವಾಡ	15	30	20
16) ಕಾರವಾರ	18	9	16
17) ಗುಲ್ಬರ್ಗಾ	29	-	-
18) ರಾಯಚೂರು	12	13	20
19) ಬಳ್ಳಾರಿ	13	26	7
20) ಬೀದರ್	11	59	24
ಒಟ್ಟು	476	601	353

ವಿಜಾಪುರ ನಗರಸಭೆ ಹಾಗೂ ನಗರ ಗ್ರಂಥಾಲಯ ಜಂಟಿಯಾಗಿ ನಿರ್ಮಿಸಲಿರುವ ಮಾರುಕಟ್ಟೆ ಸಂಕೀರ್ಣ.

819(131) ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ವಿಜಾಪುರ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ವಿಜಾಪುರ ನಗರಸಭೆ ಹಾಗೂ ನಗರ ಕೇಂದ್ರ ಗ್ರಂಥಾಲಯ ಜಂಟಿಯಾಗಿ ನಿರ್ಮಿಸಬೇಕಾಗಿರುವ ಮಾರುಕಟ್ಟೆ ಸಂಕೀರ್ಣದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

2. ಹಾಗಿದ್ದಲ್ಲಿ ಈಗ ಅದು ಯಾವ ಹಂತದಲ್ಲಿದೆ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :—

1. ಹೌದು

2. ಸರ್ಕಾರದ ಪರಿಶೀಲನೆಯಲ್ಲಿದೆ.

ಕೇಂದ್ರದಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಅಭಿವೃದ್ಧಿಗೆ ಬಂದಿರುವ ಹಣ.

820(1227) ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದ ಅಭಿವೃದ್ಧಿ ಸಲುವಾಗಿ ನೀಡಿದ ಹಣವೆಷ್ಟು?